ಚಾಮರಾಜನಗರ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದಂತೆ 1993–94ನೇ ಶ್ರೇಣಿಯಿಂದ 2001–02ನೇ ಶ್ರೇಣಿಯವರೆಗೆ ಒಟ್ಟು ದಾಖಲಾತಿ ಮಾಡಿದ ವಿವರ ಕೆಳಗಿನಂತಿದೆ.

| ಯೋಜನೆ | ನೀಡಿದ ಗುರಿ | ದಾಖಲೀಕರಣ ಮಾಡಿದ ಮನೆಗಳ ಸಂಖ್ಯೆ | ಶೇಕಡ (%) |
|---|---|---|---|
| ಗ್ರಾಮೀಣ ಆಶ್ರಯ | 4788 | 2335 | 48.77 |
| ಗ್ರಾಮೀಣ ಅಂಬೇಡ್ಕರ್ | 1833 | 587 | 32.02 |

ಮೇಲ್ಕಂಡ ವಿವರಗಳನ್ನು ನೋಡಿದರೆ ಚಾಮರಾಜನಗರ ತಾಲ್ಲೂಕು ಪಂಚಾಯತಿಯಲ್ಲಿ ದಾಖಲೀಕರಣದ ಪ್ರಗತಿ ಸಮರ್ಪಕವಾಗಿಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ 01.04.05 ರಿಂದ ಈಚೆಗೆ ಅಂದರೆ ಕಳೆದ ಮೂರು ತಿಂಗಳಿಂದ ಚಾಮರಾಜನಗರ ತಾಲ್ಲೂಕು ಪಂಚಾಯತಿಗೆ ಹಣವನ್ನು ಬಿಡುಗಡೆ ಮಾಡಿಲ್ಲ. ಕನಿಷ್ಟ ಶೇ.70ರಷ್ಟು ದಾಖಲಾತಿಯನ್ನು ಕೂಡಲೇ ಪೂರ್ಣಗೊಳಿಸುವಂತೆ ಚಾಮರಾಜನಗರ ತಾಲ್ಲೂಕು ಪಂಚಾಯತಿಯವರನ್ನು ಕೋರಿದ್ದು, ಅವರು ಅದನ್ನು ಪೂರ್ಣಗೊಳಿಸಿದ ತಕ್ಷಣ ಹಣವನ್ನು ಬಿಡುಗಡೆ ಮಾಡಲಾಗುವುದು.

**3704(3844)**; ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ);
ಮಾನ್ಯ ಶ್ರೀ ಹೆಚ್.ಸಿ.ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಬೇರೆ ರಾಜ್ಯಗಳಲ್ಲಿ 6ನೇ ಹಂತ ಮುಗಿಸಿ 7ನೇ ಹಂತಕ್ಕೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿ ಈ ಯೋಜನೆಯು ನಾಲ್ಕನೇ ಹಂತದಲ್ಲಿರುವುದು ಹಾಗೂ ಒಂದು ಹಂತದ ರೂ.200 ಕೋಟಿ ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಅಂಜನಮೂರ್ತಿ (ವಸತಿ ಸಚಿವರು)

ಅ) ಇಲ್ಲ.

ಆ) ರಾಜ್ಯದಲ್ಲಿ ಪ್ರಧಾನಮಂತ್ರಿ ಸಡಕ್ ಯೋಜನೆಯು 4ನೇ ಹಂತದಲ್ಲಿದೆ. ಯಾವುದೇ ಹಂತದ ರೂ.200.00 ಕೋಟಿ ಅನುದಾನವು ರದ್ದಾಗಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

**3706(4697);** ಶ್ರೀ ದೊಡ್ಡನಗೌಡ ಹನುಮಗೌಡ ಪಾಟೀಲ್ (ಕುಷ್ಟಗಿ); ಮಾನ್ಯ ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಸರ್ಕಾರಿ ಮುದ್ರಣಾಲಯಕ್ಕೆ ಯಾವ ಯಾವ ತರಗತಿಯ ಯಾವ ಯಾವ ವಿಷಯಗಳ ಪಠ್ಯಪುಸ್ತಕಗಳ ಮುದ್ರಣ ಕಾರ್ಯವಹಿಸಲಾಗಿದೆ. ಈ ಮುದ್ರಣ ಕಾರ್ಯಕ್ಕಾಗಿ ನೀಡಲಾಗಿರುವ ಕಾಗದದ ಪ್ರಮಾಣ ಎಷ್ಟು; ಮುದ್ರಣವಾಗದೇ ಉಳಿಯಬಹುದಾದ ಕಾಗದವನ್ನು ಮತ್ತೆ ನಿರ್ದೇಶನಾಲಯಕ್ಕೆ ಕಳುಹಿಸಿಕೊಡುತ್ತಾರೆಯೇ;

ಆ) ಪಠ್ಯಪುಸ್ತಕ ಮುದ್ರಣಕ್ಕಾಗಿ ಕಳುಹಿಸಲಾಗಿರುವ ಕಾಗದವನ್ನು ಮುದ್ರಣ ನಿರ್ದೇಶನಾಲಯ ಸರ್ಕಾರದ ಬೇರೆ ಬೇರೆ ಇಲಾಖೆಯ ಕೆಲಸಕ್ಕಾಗಿ ಬಳಕೆ ಮಾಡಿಕೊಳ್ಳಬಹುದೇ; ಹಾಗಿದ್ದಲ್ಲಿ, ಈ ಕಾಗದವನ್ನು ಸರ್ಕಾರದ ಬೇರೆ ಇಲಾಖೆಯ ಉದ್ದೇಶಕ್ಕೆ ಬಳಸಿಕೊಂಡಿದ್ದರೆ ಯಾರನ್ನು ಇದಕ್ಕೆ ಸರ್ಕಾರದ ಹೊಣೆಗಾರರನ್ನಾಗಿ ಮಾಡುವುದು, ವಿವರ ನೀಡುವುದು;

ಇ) ಪಠ್ಯಪುಸ್ತಕ ಮುದ್ರಣಕ್ಕಾಗಿ ಯಾವ ಯಾವ ತರಗತಿಯ ವಿವಿಧ ವಿಷಯಗಳ ಮುದ್ರಣ ಕಾರ್ಯಕ್ಕಾಗಿ ಖಾಸಗಿಯವರಿಗೆ ವಹಿಸಲಾಗಿತ್ತು. ಮುದ್ರಕರ ಹೆಸರು ಮತ್ತು ವಿಳಾಸವೇನು; ಇವುಗಳಿಗೂ ಕೂಡಾ ಪಠ್ಯಪುಸ್ತಕ ನಿರ್ದೇಶನಾಲಯದಲ್ಲಿ ಕಾಗದವನ್ನೇ ಮುದ್ರಿಸಲು ಬಳಕೆ ಮಾಡಿಕೊಳ್ಳಲಾಗುತ್ತಿದೆಯೇ?

ಶ್ರೀ ಆರ್.ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರಿ ಮುದ್ರಣಾಲಯಕ್ಕೆ 2005–06 ವರ್ಷದಲ್ಲಿ 1ನೇ ತರಗತಿಯಿಂದ 10ನೇ ತರಗತಿಯ ಪ್ರಮುಖ 67 ಶೀರ್ಷಿಕೆಗಳನ್ನು ಮುದ್ರಣಕ್ಕೆ ನೀಡಲಾಗಿದೆ. ಶೀರ್ಷಿಕೆಗಳ ವಿವರಗಳನ್ನು ಅನುಬಂಧ–1ರಲ್ಲಿ ತೊರಿಸಿದೆ. ಈ ಮುದ್ರಣ ಕಾರ್ಯಕ್ಕಾಗಿ ಅಗತ್ಯ ಪ್ರಮಾಣದ ಕಾಗದವನ್ನು ಮುದ್ರಣ ಇಲಾಖೆಯೇ ಖರೀದಿಸಿ ಉಪಯೋಗಿಸಿರುತ್ತದೆ. ಹಾಗಾಗಿ, ಉಳಿಕೆ ಕಾಗದವನ್ನು ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಹಿಂತಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.